# ಸುದ್ದಿ ಸಂಚಯ

## ಸ್ವಾಮಿ ವಿವೇಕಾನಂದರ ಪತ್ರ

ಸ್ವಾಮಿ ವಿವೇಕಾನಂದರು ೨೬.೮.೧೮೯೬ರಲ್ಲಿ ತಮ್ಮ ಶಿಷ್ಯ ನಂಜುಂಡ ರಾವ್ ಅವರಿಗೆ ಬರೆದ ಮೂಲಪತ್ರ ಇದೀಗ ರಾಮಕೃಷ್ಣ ಮಹಾಸಂಘದ ವಶವಾಗಿದೆ. ಅದು ಬೆಂಗಳೂರಿನಲ್ಲಿ ವಾಸಿಸುತ್ತಿರುವ ನಂಜುಂಡರಾವ್ ಕುಟುಂಬದವರ ವಶದಲ್ಲಿತ್ತು. ಅದನ್ನು ಅವರು ಬಹು ಮೂಲ್ಯವಸ್ತುವಾಗಿ ಇಟ್ಟುಕೊಂಡಿದ್ದರು. ತುಂಬ ಒತ್ತಾಯದ ಮೇರೆಗೆ ಅವರು ಆಶ್ರಮಕ್ಕೆ ನೀಡಿದರೆಂದು ಅಲಸೂರು ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ರಾಘವೇಶಾನಂದಜಿಯವರು ಹೇಳಿದರು.

ಸ್ವಿಟ್ಸರ್ಲ್ಯಾಂಡ್‌ನಿಂದ ಬರೆದ ಈ ಪತ್ರದಲ್ಲಿ ಸ್ವಾಮಿ ವಿವೇಕಾನಂದರು ಅಲ್ಲಿ ತಮ್ಮ ಅನುಭವದ ಬಗ್ಗೆ ಬರೆದಿದ್ದಾರೆ. ಭಾರತೀಯರಲ್ಲಿ ಕಂಡುಬರುವ ವ್ಯಾವಹಾರಿಕ ಪ್ರಜ್ಞೆಯ ಕೊರತೆಯನ್ನು ಕುರಿತೂ ಬರೆದಿದ್ದಾರೆ. ಮದ್ರಾಸಿಗಳು ತುಂಬ ಒಳ್ಳೆಯವರು ಮತ್ತು ಕ್ರಿಯಾಶೀಲರು ಎಂದು ಅವರನ್ನು ಪ್ರಶಂಸಿಸಿದ್ದಾರೆ. ಈ ಪತ್ರದಲ್ಲಿ ಒಂದು ಮಹತ್ವಪೂರ್ಣ ಸಂದೇಶವೂ ಇದೆ : 'ಈ ಜೀವನ ಬಂದು ಹೋಗುವಂತಹದು. ಐಶ್ವರ್ಯ, ಕೀರ್ತಿ, ಸುಖ ಎಲ್ಲವೂ ಮೂರು ದಿನಗಳದ್ದು. ಕರ್ತವ್ಯ ಕ್ಷೇತ್ರದಲ್ಲಿ ಸತ್ಯವನ್ನು ಬೋಧಿಸುತ್ತ ಸಾಯುವುದು ಪ್ರಾಪಂಚಿಕ ಹುಳುವಿನಂತೆ ಸಾಯುವುದಕ್ಕಿಂತ ಎಷ್ಟೋ ಮೇಲು.'

೨೭.೨.೨೦೦೦ದಂದು ನಂಜುಂಡರಾವ್ ಕುಟುಂಬಕ್ಕೆ ಸೇರಿದ ಡಾ. ನರೇಂದ್ರರು ಈ ಪತ್ರವನ್ನು ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾದ ಸ್ವಾಮಿ ರಂಗನಾಥಾನಂದಜಿ ಮಹಾರಾಜ್ ಅವರಿಗೆ ಸಂಭ್ರಮದ ಕಾರ್ಯಕ್ರಮದ ನಡುವೆ ಹಸ್ತಾಂತರಿಸಿದರು. ಆ ಸಂದರ್ಭದಲ್ಲಿ ನೆರೆದಿದ್ದ ೮೦೦ ಜನ ಭಕ್ತರನ್ನು ಉದ್ದೇಶಿಸಿ ಮಾತನಾಡುತ್ತ ರಂಗನಾಥಾನಂದಜಿಯವರು, 'ಮಾನವನೆ ಶ್ರೇಷ್ಠತಮ ದೇವರು ಮತ್ತು ಅವನ ಸೇವೆ ಮಾಡುವುದೇ ಶ್ರೇಷ್ಠತಮ ಪೂಜೆ' ಎಂಬ ಸಂದೇಶವನ್ನು ನೀಡಿದರು.

## ಪೊನ್ನಂಪೇಟೆಯಲ್ಲಿ ಉಚಿತ ವೈದ್ಯಕೀಯ ಶಿಬಿರ

ಪೊನ್ನಂಪೇಟೆಯ ಶ್ರೀ ರಾಮಕೃಷ್ಣ ಶಾರದಾಸೇವಾಶ್ರಮ ನಡೆಸುತ್ತಿರುವ ಈ ಆಸ್ಪತ್ರೆಯಲ್ಲಿ ಮಾರ್ಚ್ ತಿಂಗಳ ೧೦, ೧೧, ೧೨ನೇ ದಿನಾಂಕಗಳಂದು ಉಚಿತ Multi-speciality surgical camp ಏರ್ಪಡಿಸಲಾಗಿತ್ತು.

ಒಟ್ಟು ೧೦೬ ಜನರಿಗೆ ನೇತ್ರಚಿಕಿತ್ಸೆ ಮಾಡಿಸಲಾಯಿತು. ಅವರಲ್ಲಿ ೧೩ ಮಂದಿಗೆ Intra-ocular Lense ಶಸ್ತ್ರಚಿಕಿತ್ಸೆಯನ್ನೂ, ೪ ಮಂದಿಗೆ ಸಾಧಾರಣ ಶಸ್ತ್ರಚಿಕಿತ್ಸೆಯನ್ನೂ ಮಾಡಿಸಲಾಯಿತು ಮತ್ತು ಅವರಿಗೆ ಕನ್ನಡಕಗಳನ್ನೂ ನೀಡಲಾಯಿತು. ENT ಚಿಕಿತ್ಸೆಯಿಂದ ೧೦೨ ಜನ ಲಾಭ ಪಡೆದಿರುತ್ತಾರೆ. ೩೯ ಜನರಿಗೆ ದಂತಚಿಕಿತ್ಸೆ ಮಾಡಿಸಲಾಯಿತು. ಅವರಲ್ಲಿ ೨೦ ಮಂದಿಗೆ Dental Extractions ಹಾಗೂ ೧೫ ಜನರಿಗೆ Dental scaling ಮಾಡಿಸಲಾಯಿತು.

ಈ ತಪಾಸಣಾ ಶಿಬಿರವನ್ನು ಊಟಿಯಿಂದ ಆಗಮಿಸಿದ ಡಾಕ್ಟರುಗಳು ನಡೆಸಿಕೊಟ್ಟಿರುತ್ತಾರೆ. ಇವರು ಊಟಿಯಿಂದ Operative microscope, Kerameter, A-scan ಮುಂತಾದ ಅತ್ಯುತ್ಕೃಷ್ಟ ಉಪಕರಣಗಳನ್ನು ತಂದಿದ್ದರಾದರೂ ಶಿಬಿರವನ್ನು ಉಚಿತವಾಗಿಯೇ ನಡೆಸಲಾಯಿತು. ಅಲ್ಲದೆ ಎಲ್ಲ ರೋಗಿಗಳಿಗೂ ಉತ್ತಮ ಔಷಧಗಳನ್ನು ಉಚಿತವಾಗಿ ನೀಡಲಾಯಿತು.

ಮುಂದಿನ ಶಿಬಿರದಲ್ಲಿ ೨೦ ಜನರಿಗೆ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿಸಲಾಗುವುದು ಮತ್ತು ೩೦ ಜನರು ENT ಚಿಕಿತ್ಸೆಯಿಂದ ಲಾಭ ಪಡೆಯಲಿದ್ದಾರೆ. ಅವರಲ್ಲಿ ೧೦ ಮಂದಿಗೆ ಕಿವಿಯಲ್ಲಿ ಶಸ್ತ್ರಚಿಕಿತ್ಸೆ ಮಾಡಿ Hearing-aid machineಅನ್ನು ಉಚಿತವಾಗಿ ನೀಡಲಾಗುವುದು. ೧೫ ಮಂದಿಗೆ ಗಂಟಲು ಚಿಕಿತ್ಸೆಯನ್ನೂ ೫ ಜನರಿಗೆ ಮೂಗಿನ ಚಿಕಿತ್ಸೆಯನ್ನೂ ಮಾಡಲಾಗುವುದು. ಈ ಎಲ್ಲ ವಿಶೇಷ ಚಿಕಿತ್ಸೆಗಳಿಗೂ ಹೊರಗಡೆ ನೂರಾರು ರೂಪಾಯಿಗಳನ್ನೇ ವೆಚ್ಚ ಮಾಡಬೇಕಾಗುತ್ತದೆ. ಆದರೆ ಈ ಆಸ್ಪತ್ರೆಯಲ್ಲಿ ಸೇವಾದೃಷ್ಟಿಯಿಂದ ಎಲ್ಲ ರೋಗಿಗಳಿಗೂ ಉಚಿತವಾಗಿಯೇ ಚಿಕಿತ್ಸೆಯನ್ನೂ ಔಷಧಗಳನ್ನೂ ನೀಡಲಾಗುವುದು.

## ನಾರಾಯಣಪುರ ಆಶ್ರಮಕ್ಕೆ ಅಂಬೇಡ್ಕರ್ ಪ್ರಶಸ್ತಿ

ಮಧ್ಯಪ್ರದೇಶದ ಬಸ್ತಾರ್ ಜಿಲ್ಲೆಯ ನಾರಾಯಣಪುರದಲ್ಲಿರುವ ರಾಮಕೃಷ್ಣ ಮಹಾಸಂಘದ ಶಾಖೆಯಾದ ರಾಮಕೃಷ್ಣ ಮಿಷನ್ ಆಶ್ರಮಕ್ಕೆ ಡಾ.ಅಂಬೇಡ್ಕರ್ ರಾಷ್ಟ್ರೀಯ ಪ್ರಶಸ್ತಿಯು ಲಭಿಸಿದೆ. ಸಾಮಾಜಿಕ ಅರಿವು ಮತ್ತು ದುರ್ಬಲ ವರ್ಗದ ಏಳ್ಗೆಗಾಗಿ ಈ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಲಾಗುತ್ತದೆ. ೧೪.೪.೨೦೦೦ದಂದು ಭಾರತದ ರಾಷ್ಟ್ರಪತಿ ಶ್ರೀ ಕೆ.ಆರ್. ನಾರಾಯಣನ್ ಅವರು ನವದೆಹಲಿಯಲ್ಲಿ ಈ ಪ್ರಶಸ್ತಿಯನ್ನು ನೀಡಿದರು. ಆಶ್ರಮದ ಪರವಾಗಿ, ಅದರ ಕಾರ್ಯದರ್ಶಿಗಳಾದ ಸ್ವಾಮಿ ತ್ರೈಲೋಕ್ಯಾನಂದಜಿಯವರು ಪ್ರಶಸ್ತಿಯನ್ನು ಸ್ವೀಕರಿಸಿದರು

ನಾರಾಯಣಪುರದ ರಾಮಕೃಷ್ಣ ಮಿಷನ್ ಆಶ್ರಮವು ೧೯೮೫ರಲ್ಲಿ ಪ್ರಾರಂಭವಾಯಿತು. ಅಬುಝ್‌ಮಾರ್‌ನ ಪರಿಶಿಷ್ಟ ವರ್ಗದವರ ಏಳ್ಗೆಗಾಗಿ ಈ ಕೇಂದ್ರವು ಪ್ರಾರಂಭವಾಯಿತು. ವೈದ್ಯಕೀಯ ಸೌಲಭ್ಯ, ವ್ಯವಸಾಯದಲ್ಲಿ ವಿಶೇಷ ತರಬೇತಿ ನೀಡುವುದು, ವಿದ್ಯಾಭ್ಯಾಸ ಇವೇ ಮುಂತಾದ ಸೇವಾಕಾರ್ಯಗಳ ಮೂಲಕ ಆ ಭಾಗದ ಪರಿಶಿಷ್ಟ ವರ್ಗದವರ ಜೀವನಮಟ್ಟವನ್ನು ಉತ್ತಮ ಪಡಿಸಲು ಈ ಕೇಂದ್ರವು ಶ್ರಮಿಸುತ್ತಿದೆ. ಇದರ ವಿಶಿಷ್ಟ ಸೇವಾಕಾರ್ಯವನ್ನು ಗುರುತಿಸಿ ಭಾರತ ಸರ್ಕಾರವು ಈ ವಿಶೇಷ ಪ್ರಶಸ್ತಿಯನ್ನು ನೀಡಿ ಸನ್ಮಾನಿಸುತ್ತಿದೆ.